# ಆನ್‌ಲೈನ್ ಅರ್ಜಿ ಭರ್ತಿ ಮಾಡಲು ಅಭ್ಯರ್ಥಿಗಳಿಗೆ ಸೂಚನೆಗಳು

**ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಭರ್ತಿ ಮಾಡುವ ಮೊದಲು ನೇಮಕಾತಿ ಅಧಿಸೂಚನೆ ಹಾಗೂ ಸರ್ಕಾರದ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಓದಿಕೊಂಡು, ಈ ಕೆಳಕಂಡ ಸೂಚನೆಗಳನ್ನು ಕಡ್ಡಾಯವಾಗಿ ಅನುಸರಿಸುವುದು.**

1. ಅಭ್ಯರ್ಥಿಯು ಅರ್ಜಿ ಸಲ್ಲಿಸಲು ಪ್ರಾರಂಭಿಸುವ ಮೊದಲು ತಮ್ಮ ಇತ್ತೀಚಿನ ಭಾವಚಿತ್ರ ಹಾಗೂ ಸಹಿಯನ್ನು JPG/JPEG Format ನಲ್ಲಿ ಸ್ಕ್ಯಾನ್ ಮಾಡಿ ಇಟ್ಟುಕೊಳ್ಳತಕ್ಕದ್ದು ಹಾಗೂ ಅಪ್ ಲೋಡ್ ಮಾಡುವ ಸಮಯದಲ್ಲಿ ಯಾವುದೇ ವ್ಯತ್ಯಾಸಗಳಾಗದಂತೆ ಎಚ್ಚರಿಕೆ ವಹಿಸುವುದು.

2. ಎಸ್.ಎಸ್.ಎಲ್.ಸಿ./ಸಿ.ಬಿ.ಎಸ್.ಸಿ/ಐ.ಸಿ.ಎಸ್.ಸಿ, 10ನೇ ತರಗತಿ ಪ್ರಮಾಣ ಪತ್ರದಲ್ಲಿರುವಂತೆ ಅಭ್ಯರ್ಥಿಯ ಹೆಸರು, ಜನ್ಮ ದಿನಾಂಕ, ನೊಂದಣಿ ಸಂಖ್ಯೆ, ಎಸ್.ಎಸ್.ಎಲ್.ಸಿ.ಪಾಸಾದ ವರ್ಷ ಹಾಗೂ ಅಭ್ಯರ್ಥಿಯು ಪಡೆದಿರುವ ಅಂಕಗಳನ್ನು ನಮೂದಿಸಬೇಕಿರುವುದರಿಂದ ಎಸ್.ಎಸ್.ಎಲ್.ಸಿ./ಸಿ.ಬಿ.ಎಸ್.ಸಿ/ಐ.ಸಿ.ಎಸ್.ಸಿ, 10ನೇ ತರಗತಿಯ ಪ್ರಮಾಣ ಪತ್ರದ ಪ್ರತಿಯನ್ನು ಅರ್ಜಿಯನ್ನು ಸಲ್ಲಿಸುವ ಸಂದರ್ಭದಲ್ಲಿ ಇಟ್ಟುಕೊಳ್ಳತಕ್ಕದ್ದು.

3. ಅಭ್ಯರ್ಥಿಯು ಆನ್‌ಲೈನ್ ಅರ್ಜಿಯಲ್ಲಿ ಸಲ್ಲಿಸುವ ಮಾಹಿತಿಯೇ ಅಂತಿಮವಾಗಿದ್ದು ಇದೇ ಮಾಹಿತಿ ಆಧಾರದ ಮೇಲೆ ನೇಮಕಾತಿ ಪ್ರಕ್ರಿಯೆ ನಡೆಯುವುದರಿಂದ ಅಭ್ಯರ್ಥಿಯು ನಿಖರ ಮಾಹಿತಿಯನ್ನು ಅರ್ಜಿಯಲ್ಲಿ ನೀಡತಕ್ಕದ್ದು. ಆದ್ದರಿಂದ ಅಭ್ಯರ್ಥಿಯು ಅರ್ಜಿ ಸಲ್ಲಿಸುವಾಗ ಯಾವುದೇ ತಪ್ಪುಗಳಾಗದಂತೆ ಮುನ್ನೆಚ್ಚರಿಕೆ ವಹಿಸಿ ಅರ್ಜಿಯನ್ನು ಭರ್ತಿ ಮಾಡತಕ್ಕದ್ದು.

4. ಅಭ್ಯರ್ಥಿಯು, ತಪ್ಪು ಮಾಹಿತಿಯನ್ನು ನೀಡಿದಲ್ಲಿ, ಅಂತಹ ಅರ್ಜಿಗಳನ್ನು ಮಾನ್ಯ ಮಾಡುವುದಿಲ್ಲ. ಒಂದು ವೇಳೆ, ಉದ್ದೇಶ ಪೂರ್ವಕವಾಗಿ ತಪ್ಪು ಮಾಹಿತಿಯನ್ನು ನೀಡಿ ಅರ್ಜಿ ಸಲ್ಲಿಸಿದಲ್ಲಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ಸಾಮಾನ್ಯ ನೇಮಕಾತಿ) ಅನ್ವಯ ಕಾನೂನು ರೀತಿಯ ಕ್ರಮವನ್ನು ಜರುಗಿಸಲಾಗುವುದು.

**ಹಂತ-1 :**

1. ಅಭ್ಯರ್ಥಿಗಳು ಜಿಲ್ಲಾಧಿಕಾರಿಗಳ ಅಧಿಕೃತ ವೆಬ್ ಸೈಟ್‌ನ. Apply online ಲಿಂಕ್‌ನಲ್ಲಿ Online Application for Recruitment of Cooks & Kitchen Servant posts ಅನ್ನು ಒತ್ತಿದಲ್ಲಿ ಈ ಕೆಳಕಂಡ ವಿವರಗಳುಳ್ಳ HOME SCREEN ತೆರೆದುಕೊಳ್ಳುತ್ತದೆ.

SUBMIT APPLICATION

UPLOAD PHOTO AND SIGNATURE

GENERATE POSTAL CHALLAN

PRINT APPLICATION

2. SUBMIT APPLICATION ನಲ್ಲಿ CLICK ಮಾಡಿ ಅರ್ಜಿಯಲ್ಲಿ ಕೋರಿರುವ ಮಾಹಿತಿಯನ್ನು ನಿಖರವಾಗಿ ಭರ್ತಿ ಮಾಡತಕ್ಕದ್ದು. ಒಬ್ಬ ಅಭ್ಯರ್ಥಿಯು ರಾಜ್ಯದ ಯಾವುದೇ ಜಿಲ್ಲೆಗೆ ಅರ್ಜಿ ಸಲ್ಲಿಸಬಹುದು.ಅದರೆ ಪ್ರತಿ ಅರ್ಜಿಗೆ ಪ್ರತ್ಯೇಕ ಶುಲ್ಕ ಪಾವತಿಸಬೇಕು.

3. ಒಬ್ಬ ಅಭ್ಯರ್ಥಿಯು ಅಡುಗೆಯವರು ಮತ್ತು ಅಡುಗೆ ಸಹಾಯಕರು ಎರಡು ಹುದ್ದೆಗೂ ಅರ್ಜಿ ಸಲ್ಲಿಸಬಹುದು. ಆದರೆ ಎರಡು ಹುದ್ದೆಗಳಿಗೂ ನಿಗದಿಪಡಿಸಿರುವ ಅರ್ಜಿ ಶುಲ್ಕವನ್ನು ಪ್ರತ್ಯೇಕವಾಗಿ ಪಾವತಿಸಬೇಕು.

4. ಅಭ್ಯರ್ಥಿಯು ಒಂದು ಜಿಲ್ಲೆಯಲ್ಲಿ ಒಂದು ಹುದ್ದೆಗೆ ಅರ್ಜಿ ಸಲ್ಲಿಸಿ, ಅದೇ ಜಿಲ್ಲೆಯ ಇನ್ನೊಂದು ಹುದ್ದೆಗೆ ಅರ್ಜಿ ಸಲ್ಲಿಸಲು ಇಚ್ಛಿಸಿದರೆ ಪುನ: ಅರ್ಜಿಯನ್ನು ಪೂರ್ತಿಯಾಗಿ ಭರ್ತಿ ಮಾಡುವ ಅವಶ್ಯಕತೆ ಇರುವುದಿಲ್ಲ. ಬದಲಾಗಿ already registered button ನಲ್ಲಿ Reference No. ನಮೂದಿಸಿದರೆ ಅಭ್ಯರ್ಥಿಯ ವಿವರಗಳು ಮೂಡುತ್ತವೆ. ಇದರಲ್ಲಿ ಅರ್ಜಿ ಸಲ್ಲಿಸಲು ಇಚ್ಛಿಸುವ ಹುದ್ದೆ ಮಾಹಿತಿಯನ್ನು ಮಾತ್ರ ನೀಡತಕ್ಕದ್ದು.

5. ಅಭ್ಯರ್ಥಿಯು ಅರ್ಜಿಯಲ್ಲಿರುವ ಹಾಗೂ ತಮಗೆ ಅನ್ವಯಿಸುವ ಮಾಹಿತಿಗಳನ್ನು ಭರ್ತಿ ಮಾಡಿದ ನಂತರ ಅರ್ಜಿಯಲ್ಲಿರುವ preview button ಒತ್ತುವುದು. Preview page ನಲ್ಲಿ ಅಭ್ಯರ್ಥಿಯು ಭರ್ತಿ ಮಾಡಿದ ಮಾಹಿತಿಯ ವಿವರಗಳು ಕಾಣಿಸುತ್ತದೆ. ಅಭ್ಯರ್ಥಿಯು ಒಂದು ವೇಳೆ ಅರ್ಜಿ ಭರ್ತಿ ಮಾಡುವಾಗ ತಪ್ಪುಗಳಾಗಿದ್ದಲ್ಲಿ/ಬದಲಾವಣೆ ಮಾಡಬೇಕಾದಲ್ಲಿ Preview page ನಲ್ಲಿರುವ back button ಒತ್ತುವುದು. ಪುನ: ತಪ್ಪುಗಳನ್ನು ಸರಿಪಡಿಸಿ/ಬದಲಾವಣೆ ಮಾಡಿ submit button ಒತ್ತುವುದು. ಒಮ್ಮೆ submit button ಒತ್ತಿದ ಮೇಲೆ ಯಾವುದೇ ಬದಲಾವಣೆಗೆ ಅವಕಾಶವಿರುವುದಿಲ್ಲ.

6. ಹೀಗೆ submit ಮಾಡಿದ ನಂತರ ಅಭ್ಯರ್ಥಿಗೆ, ಅರ್ಜಿ ನೊಂದಣಿ ಸಂಖ್ಯೆಯು (Reference No.) ಕಂಪ್ಯೂಟರ್ ಪರದೆಯ ಮೇಲೆ ಲಭ್ಯವಾಗುತ್ತದೆ. ಈ ಅರ್ಜಿ ನೊಂದಣಿ ಸಂಖ್ಯೆಯನ್ನು (Reference No.) ಮುಂದಿನ ಎಲ್ಲಾ ಹಂತಗಳಲ್ಲೂ ನಮೂದಿಸಬೇಕಾಗಿರುವುದರಿಂದ ಜೋಪಾನವಾಗಿ ಕಾಯ್ದಿರಿಸಿಕೊಳ್ಳುವುದು. ನಂತರ Home Button ಒತ್ತುವುದು.

**ಹಂತ-2**

1. ಅಭ್ಯರ್ಥಿಯು Home Screen ನಲ್ಲಿ UPLOAD PHOTO AND SIGNATURE ನಲ್ಲಿ CLICK ಮಾಡಿ ತಮ್ಮ ಇತ್ತೀಚಿನ ಭಾವಚಿತ್ರ ಹಾಗೂ ತಮ್ಮ ಸಹಿಯನ್ನು ಅಪ್‌ಲೋಡ್ ಮಾಡುವುದು

**ಭಾವಚಿತ್ರ ಅಳತೆ**

| ಪಾಸ್ ಪೋರ್ಟ್ ಭಾವಚಿತ್ರ | ಪಾಸ್ ಪೋರ್ಟ್ ಭಾವಚಿತ್ರ |
|---|---|
| File Size < 100 kb | 35mm(W) |
| DPI Setting = 100 dpl | |
| Image Scale = 100% | 45mm(H) |
| Color = True Color | |
| Type = JPEG/JPG | |

**ಅಭ್ಯರ್ಥಿಯ ಸಹಿ:**

ಅಭ್ಯರ್ಥಿಯು ಅರ್ಜಿ ಸಲ್ಲಿಸುವ ಮೊದಲು ಬಿಳಿಹಾಳೆಯಲ್ಲಿ ಕಪ್ಪುಶಾಹಿಯಿಂದ ತಮ್ಮ ಸಹಿಯನ್ನು ಮಾಡಿಟ್ಟುಕೊಂಡು ಇದನ್ನು ಈ ಕೆಳಕಂಡ ಅಳತೆಯಲ್ಲಿ ಅಪ್ ಲೋಡ್ ಮಾಡುವುದು

| | |
|---|---|
| ಸಹಿ ಅಳತೆ | 100 kb |

2. ಅಭ್ಯರ್ಥಿಯು ಫೋಟೋ ಮತ್ತು ಸಹಿಯನ್ನು ಅಪ್‌ಲೋಡ್ ಮಾಡಿದ ನಂತರ Home Button ಒತ್ತುವುದು. ನಂತರ GENERATE POSTAL CHALLAN ನಲ್ಲಿ CLICK ಮಾಡಿ ಅಭ್ಯರ್ಥಿಯು ಅರ್ಜಿ .ಶುಲ್ಕವನ್ನು ಪಾವತಿಸುವ ಚಲನ್ ಅನ್ನು Home Screen ನಿಂದ ಡೌನ್‌ಲೋಡ್ ಮಾಡಿಕೊಂಡು ರಾಜ್ಯದ ಯಾವುದೇ ಎಲೆಕ್ಟ್ರಾನಿಕ್ ಅಂಚೆ ಕಛೇರಿಗಳಲ್ಲಿ e-Payment ಮೂಲಕ ನಿಗದಿಪಡಿಸಿರುವ ಶುಲ್ಕವನ್ನು ದಿನಾಂಕ 21.11.2016 ಮಧ್ಯಾಹ್ನ 3.00 ಗಂಟೆಯೊಳಗೆ .E-ಅಂಚೆ ಕಛೇರಿಯಲ್ಲಿ ಪಾವತಿಸುವುದು. ಅಭ್ಯರ್ಥಿಯು ಅರ್ಜಿ ಶುಲ್ಕವನ್ನು ಪಾವತಿಸಿರುವುದು ಸ್ವೀಕೃತವಾಗಿರುವ ಬಗ್ಗೆ www.karnatakapost.gov.in ನಲ್ಲಿ, ಅರ್ಜಿ ಶುಲ್ಕವನ್ನು ಪಾವತಿಸಿದ ಎರಡು ದಿನಗಳ ನಂತರ ಖಚಿತಪಡಿಸಿಕೊಳ್ಳಬಹುದು.

3. ಎಲೆಕ್ಟ್ರಾನಿಕ್ ಅಂಚೆ ಕಛೇರಿಗಳಲ್ಲಿ e-Payment ಮೂಲಕ ಶುಲ್ಕವನ್ನು ಪಾವತಿಸಿದ ಎರಡು ದಿನಗಳ ನಂತರ ಅಭ್ಯರ್ಥಿಯು ತಮ್ಮ ಅರ್ಜಿ Reference No ಉಪಯೋಗಿಸಿ, Home Screen ನಲ್ಲಿ PRINT APPLICATION CLICK ಮಾಡಿ ACKNOWLEDGEMENT SLIP ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವುದು ಹಾಗೂ ಈ ಪ್ರತಿಯನ್ನು ಮುಂದಿನ ಎಲ್ಲಾ ಪ್ರಕ್ರಿಯೆಗಳಿಗೆ ನೇಮಕಾತಿ ಪ್ರಾಧಿಕಾರ ಕೋರಿದಲ್ಲಿ ಹಾಜರುಪಡಿಸುವುದು.

ಆಯುಕ್ತರ ಪರವಾಗಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು